ಕರ್ನಾಟಕ ಸರ್ಕಾರ

# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ. ಮಲ್ಲೇಶ್ವರಂ. ಬೆಂಗಳೂರು

*****************************************************************************************

**ಸಂಖ್ಯೆ : ಗಣಕಶಾಖೆ/ಎಸ್.ಎಸ್.ಎಲ್.ಸಿ./ಶುಲ್ಕ ಪಾವತಿ/01/2021-22** **ದಿನಾಂಕ: 25-01-2022**

**– ಸುತ್ತೋಲೆ –**

ವಿಷಯ: ಮಾರ್ಚ್–2022ರ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ನೋಂದಣಿಯಾಗಿರುವ ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕ ಪಾವತಿಸುವ ಬಗ್ಗೆ

ಉಲ್ಲೇಖ: 1) ಈ ಕಛೇರಿಯ ಅಧಿಸೂಚನೆ ಸಂ: ಎ8/ಎಸ್.ಎಸ್.ಎಲ್.ಸಿ.ಅಧಿಸೂಚನೆ/ಮಾರ್ಚ್–2022 /39/2021–22 ದಿನಾಂಕ : 07.12.2021

2) ಈ ಕಛೇರಿಯ ಗಣಕ ಶಾಖೆಯ ಸುತ್ತೋಲೆ ಸಂ: ಸಿಎಸ್1/SATS/ಮಾರ್ಚ್–2022/01/ 2021–22 ದಿನಾಂಕ : 09.12.2021

*******

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ವತಿಯಿಂದ ನಡೆಯಲಿರುವ ಮಾರ್ಚ್–2022ರ ಎಸ್.ಎಸ್.ಎಲ್.ಸಿ. ಮುಖ್ಯ ಪರೀಕ್ಷೆಗೆ ಅರ್ಹ ಅಭ್ಯರ್ಥಿಗಳ ನೋಂದಣಿ ಮಾಹಿತಿಗಳನ್ನು ಮುಖ್ಯ ಶಿಕ್ಷಕರ ವತಿಯಿಂದ ಮಂಡಳಿಯ ಜಾಲತಾಣದ (https://sslc.karnataka.gov.in) ಶಾಲಾ ಲಾಗಿನ್‌ನಲ್ಲಿ ಈಗಾಗಲೇ ಪಡೆಯಲಾಗಿದೆ. ರಾಜ್ಯದ ಎಲ್ಲಾ ಸರ್ಕಾರಿ ಮತ್ತು ಮಾನ್ಯತೆ ಪಡೆದಿರುವ ಖಾಸಗಿ ಅನುದಾನಿತ ಹಾಗೂ ಅನುದಾನ ರಹಿತ ಶಾಲೆಗಳ ಮುಖ್ಯಸ್ಥರಿಗೆ ತಮ್ಮ ಶಾಲೆಯ ಮಾರ್ಚ್–2022ರ ಎಸ್.ಎಸ್.ಎಲ್.ಸಿ. ಪರೀಕ್ಷೆಯನ್ನು ತೆಗೆದುಕೊಳ್ಳುವ ವಿದ್ಯಾರ್ಥಿಗಳ (ಶಾಲಾ ಅಭ್ಯರ್ಥಿ, ಖಾಸಗಿ ಅಭ್ಯರ್ಥಿ, ಪುನರಾವರ್ತಿತ ಶಾಲಾ ಹಾಗೂ ಪುನರಾವರ್ತಿತ ಖಾಸಗಿ ಅಭ್ಯರ್ಥಿಗಳು) ವಿವರಗಳನ್ನು ಆನ್‌ಲೈನ್ ಮೂಲಕ ಅಪ್‌ಲೋಡ್ ಮಾಡಲು ಅವಕಾಶ ಕಲ್ಪಿಸಲಾಗಿತ್ತು. ಈಗ ನೋಂದಣಿಯಾದ ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕವನ್ನು ಮಂಡಳಿಗೆ ಪಾವತಿಸಬೇಕಾಗಿದೆ.

1) ಮಾರ್ಚ್–2022ರ ಎಸ್.ಎಸ್.ಎಲ್.ಸಿ. ಪರೀಕ್ಷೆಯನ್ನು ತೆಗೆದುಕೊಳ್ಳುವ ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕ ಪಾವತಿಸುವ ಚಲನ್ **ಮಂಡಳಿಯ ಶಾಲಾ ಲಾಗಿನ್‌ನಲ್ಲಿಯೇ ದಿನಾಂಕ: 27–01–2022** ರಿಂದ ಜನರೇಟ್ ಆಗುತ್ತದೆ.
2) **ಶಾಲಾ ಲಾಗಿನ್‌ನಲ್ಲಿ ಸೃಜಿಸಲಾಗುವ ಚಲನ್‌ನ್ನು ಬಳಸಿಯೇ ಪರೀಕ್ಷಾ ಶುಲ್ಕವನ್ನು ಪಾವತಿಸಬೇಕು. ಮಂಡಳಿಯ ಇತರೆ ಚಲನ್ ಬಳಸಿ ಶುಲ್ಕ ಪಾವತಿಸಬಾರದು, ಪಾವತಿಸಿದಲ್ಲಿ ಅಂತಹ ಚಲನ್‌ನ್ನು ಪರಿಗಣಿಸಲಾಗುವುದಿಲ್ಲ.**
3) **ಒಮ್ಮೆ ಚಲನ್ ಡೌನ್‌ಲೋಡ್ ಮಾಡಿಕೊಂಡ ನಂತರ ಯಾವುದೇ ಕಾರಣಕ್ಕೂ ವಿದ್ಯಾರ್ಥಿಗಳ ಮಾಹಿತಿಯನ್ನು ಅಪ್‌ಡೇಟ್ ಮಾಡಲು ಅವಕಾಶವಿರುವುದಿಲ್ಲ. ಆದ್ದರಿಂದ ಯಾವುದೇ ಸೇರ್ಪಡೆ, updation or delete ಮಾಡಬೇಕಾಗಿದ್ದಲ್ಲಿ ಅದನ್ನು ಮಾಡಿ ನಂತರವೇ ಚಲನ್ ಡೌನ್‌ಲೋಡ್ ಮಾಡಿಕೊಳ್ಳುವುದು.**
4) ಮಂಡಳಿಯ ಶಾಲಾ ಲಾಗಿನ್‌ನಲ್ಲಿ ಚಲನ್ ಜನರೇಟ್ ಮಾಡಲು Registration for March 2022 Exam ಮೆನುವಿನಲ್ಲಿ ನೀಡಲಾಗಿರುವ Dropdown listನಲ್ಲಿರುವ Download Challan - 2022 SSLC Exam ಮೆನು ಮೇಲೆ ಕ್ಲಿಕ್ ಮಾಡಿದಾಗ, ಮೊದಲು ಪರಿಷ್ಕೃತ ನಾಮಿನಲ್ ರೋಲ್‌ನ್ನು ಡೌನ್‌ಲೋಡ್ ಮಾಡಿಕೊಳ್ಳತಕ್ಕದ್ದು. ನಾಮಿನಲ್ ರೋಲ್‌ನ್ನು ಡೌನ್‌ಲೋಡ್ ಮಾಡಿಕೊಂಡ ನಂತರವೇ ಚಲನ್ ಡೌನ್‌ಲೋಡ್ ಆಗುತ್ತದೆ.
5) ಒಂದು ವೇಳೆ ತಮ್ಮ ಶಾಲೆಯಲ್ಲಿ ಪರೀಕ್ಷಾ ನೋಂದಣಿಗೆ ಸಂಬಂಧಿಸಿದಂತೆ ಯಾವುದಾದರೂ Errors ಇದ್ದಲ್ಲಿ ಆ Errors List display ಆಗುತ್ತದೆ. ಮುಖ್ಯಶಿಕ್ಷಕರು ಆ Errorsನ್ನು ಸರಿಪಡಿಸಿದ ನಂತರವೇ Challan Generate ಆಗುತ್ತದೆ.

   Error type 1: Photo / Signature not uploaded .
   Error type 2: RD Number not entered for students who have claimed Fee Exemption.

6) ಮುಖ್ಯಶಿಕ್ಷಕರು ಚಲನ್‌ನನ್ನು ಡೌನ್‌ಲೋಡ್ ಮಾಡಿಕೊಂಡ ಮೇಲೆ ತಮ್ಮ ಶಾಲೆಯ ವತಿಯಿಂದ ಮಾರ್ಚ್–2022ರ ಪರೀಕ್ಷೆಗೆ ನೋಂದಣಿಯಾಗಿರುವ ಶಾಲಾ ವಿದ್ಯಾರ್ಥಿಗಳ(CCERF), ಖಾಸಗಿ ವಿದ್ಯಾರ್ಥಿಗಳ(CCEPF), ಪುನರಾವರ್ತಿತ

ಶಾಲಾ ಅಭ್ಯರ್ಥಿಗಳ (CCERR), ಪುನರಾವರ್ತಿತ ಖಾಸಗಿ ಅಭ್ಯರ್ಥಿಗಳ (CCEPR) ಹಾಗೂ 2003ರಿಂದ 2010ರವರೆಗಿನ NSR ಮತ್ತು NSPR ಅಭ್ಯರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಚಲನ್ ಜನರೇಟ್ ಆಗಿದೆಯೇ ಎಂದು ಪರಿಶೀಲಿಸಿಕೊಳ್ಳತಕ್ಕದ್ದು.

7) ಮಾರ್ಚ್-2022ರ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ನೋಂದಣಿಯಾಗಿರುವ ಎಲ್ಲಾ ವಿದ್ಯಾರ್ಥಿಗಳಿಗೆ ಮಂಡಳಿಯ ಜಾಲತಾಣದಲ್ಲಿ ವಿದ್ಯಾರ್ಥಿಗಳ ಮಾಹಿತಿ ನೋಂದಣಿ ಮಾಡುವ ಮತ್ತು ಪ್ರವೇಶ ಪತ್ರಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ಪ್ರಕ್ರಿಯೆಗೆ ಸಂಬಂಧಿಸಿದ ವೆಚ್ಚ ಪ್ರತಿ ವಿದ್ಯಾರ್ಥಿಗೆ **ರೂ.25/-ರಂತೆ** ಸಾದಿಲ್ವಾರು ಲೆಕ್ಕ ಹಾಕಲಾಗುತ್ತದೆ.
8) **ಮಂಡಳಿಗೆ ಪಾವತಿಸಬೇಕಾದ ಪರೀಕ್ಷಾ ಶುಲ್ಕದ ಬಾಬ್ತು** = ಶಾಲೆಯಲ್ಲಿ ಪರೀಕ್ಷೆಗೆ ನೋಂದಣಿಯಾಗಿರುವ ಎಲ್ಲಾ ರೀತಿಯ ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕದ ಮೊತ್ತ – ವಿದ್ಯಾರ್ಥಿಗಳ ಮಾಹಿತಿ ನೋಂದಣಿ ಮಾಡುವ ಮತ್ತು ಪ್ರವೇಶ ಪತ್ರಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ಪ್ರಕ್ರಿಯೆಗೆ ಸಂಬಂಧಿಸಿದ ಸಾದಿಲ್ವಾರು ವೆಚ್ಚ.
9) ಮಂಡಳಿಗೆ ಪಾವತಿಸಬೇಕಾದ ಪರೀಕ್ಷಾ ಶುಲ್ಕದ ಬಾಬ್ತು ಕೆಲವೊಮ್ಮೆ 0 (ಶೂನ್ಯ) ಅಥವಾ ಋಣ ಮೊತ್ತ ಇರಬಹುದು. ಅಂತಹ ಸಂದರ್ಭದಲ್ಲಿ ಶುಲ್ಕವನ್ನು ಬ್ಯಾಂಕಿಗೆ ಪಾವತಿಸುವ ಅಗತ್ಯವಿರುವುದಿಲ್ಲ. ಅಂತಹ ಚಲನ್‌ನ School copy ಯನ್ನೂ ಸಹ ಮಂಡಳಿಗೆ ಕಡ್ಡಾಯವಾಗಿ ಸಲ್ಲಿಸುವುದು.
10) ಪರೀಕ್ಷಾ ಶುಲ್ಕ ಪಾವತಿಸುವ ಚಲನ್ ದ್ವಿಪ್ರತಿಯಲ್ಲಿ (Bank copy & School copy) ಜನರೇಟ್ ಆಗುತ್ತದೆ. ಅದನ್ನು ಬಳಸಿ Union Bank of India ಅಥವಾ ಯಾವುದೇ ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಪಾವತಿಸಬೇಕು. Union Bank of India ನಲ್ಲಿ ಪಾವತಿಸಿದಲ್ಲಿ ಬ್ಯಾಂಕ್ ಸೇವಾ ಶುಲ್ಕ ರೂ.5/- ಆಗಿರುತ್ತದೆ. ಇತರೆ ಯಾವುದೇ ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ಪಾವತಿಸಿದಲ್ಲಿ ಆಯಾ ಬ್ಯಾಂಕ್ ವಿಧಿಸುವ ಸೇವಾ ಶುಲ್ಕವನ್ನು ಭರಿಸಬೇಕಿರುತ್ತದೆ. ಪರೀಕ್ಷಾ ಶುಲ್ಕವನ್ನು ಪಾವತಿಸಿದ ನಂತರ Bank copy ಯನ್ನು ಬ್ಯಾಂಕಿನಲ್ಲಿಯೇ ಉಳಿಸಿಕೊಂಡು School copy ಯನ್ನು ತಮಗೆ ಹಿಂದಿರುಗಿಸಲಾಗುತ್ತದೆ.
11) ಶುಲ್ಕ ಪಾವತಿಸಿದ ಚಲನ್‌ನ School copy ಯನ್ನು ಅಧಿಸೂಚನೆಯಲ್ಲಿ ಸೂಚಿಸಿರುವ ಇತರೆ ದಾಖಲೆಗಳೊಂದಿಗೆ ದಿನಾಂಕ:10-02-2022ರ ಒಳಗೆ ಮಂಡಳಿಗೆ ತಲುಪುವಂತೆ ಕಡ್ಡಾಯವಾಗಿ ಸಲ್ಲಿಸುವುದು.
12) ಚಲನ್ ಡೌನ್‌ಲೋಡ್ ಮಾಡಿಕೊಳ್ಳಲು ಅಂತಿಮ ದಿನಾಂಕ : 31-01-2022
13) ಬ್ಯಾಂಕಿಗೆ ಶುಲ್ಕ ಪಾವತಿಸಲು ಅಂತಿಮ ದಿನಾಂಕ : 02-02-2022

ಉಪನಿರ್ದೇಶಕರು (ಆಡಳಿತ) ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳು ತಮ್ಮ ವ್ಯಾಪ್ತಿಯ ಶಾಲೆಗಳ ಮುಖ್ಯಸ್ಥರು ನಿಗದಿತ ಅವಧಿಯಲ್ಲಿ ಶುಲ್ಕ ಪಾವತಿ ಮಾಡುವ ಬಗ್ಗೆ ಕ್ರಮ ವಹಿಸುವುದು.

(ಗೋಪಾಲಕೃಷ್ಣ ಹೆಚ್.ಎನ್.)
ನಿರ್ದೇಶಕರು, (ಪರೀಕ್ಷೆಗಳು)

**ಅಗತ್ಯ ಕ್ರಮಕ್ಕಾಗಿ :**

ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ) ಇವರುಗಳಿಗೆ

1) ರಾಜ್ಯದ ಎಲ್ಲಾ ಕ್ಷೇತ್ರಶಿಕ್ಷಣಾಧಿಕಾರಿಗಳಿಗೆ
2) ರಾಜ್ಯದ ಎಲ್ಲಾ ಸರ್ಕಾರಿ ಮತ್ತು ಮಾನ್ಯತೆ ಪಡೆದಿರುವ ಖಾಸಗಿ ಅನುದಾನಿತ ಹಾಗೂ ಅನುದಾನ ರಹಿತ ಪ್ರೌಢಶಾಲೆಗಳ ಮುಖ್ಯಸ್ಥರಿಗೆ

**ಪ್ರತಿಗಳನ್ನು :**

1) ಮಾನ್ಯ ಮುಖ್ಯ ಕಾರ್ಯದರ್ಶಿಗಳು, ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ, ಬಹುಮಹಡಿಗಳ ಕಟ್ಟಡ, ಬೆಂಗಳೂರು
2) ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು
3) ಮಾನ್ಯ ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ, ಬೆಂಗಳೂರು
4) ಮಾನ್ಯ ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ
5) ಮಾನ್ಯ ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರ್ಗಿ
6) ನಿರ್ದೇಶಕರು, ಪ್ರೌಢ ಶಿಕ್ಷಣ, ಮಾನ್ಯ ಆಯುಕ್ತರ ಕಛೇರಿ
7) ವಿಭಾಗೀಯ ಸಹನಿರ್ದೇಶಕರು, ಬೆಂಗಳೂರು, ಮೈಸೂರು, ಬೆಳಗಾಂ ಹಾಗೂ ಕಲಬುರ್ಗಿ ವಿಭಾಗಗಳು

ಇವರುಗಳಿಗೆ ಗೌರವಪೂರ್ವಕವಾಗಿ ಸಲ್ಲಿಸಿದೆ.